ಜನೋದಯ ಸಂಸ್ಥೆಯ ಸಾವಯವ ಕೃಷಿ ರೈತರಿಂದ

# “ನಮ್ಮ ಸುದ್ದಿ”

ಸಂಚಿಕೆ - ೦೨ ರಲ್ಲಿ - ಸಾವಯವ ಕೃಷಿ ಉತ್ಪನ್ನ ಮತ್ತು ಪರ್ಯಾಯ ಮಾರುಕಟ್ಟೆ ವ್ಯವಸ್ಥೆಗಳ ಪಾಠ ಪ್ರತಿ




[illegible]

ಗೆ,

ರವರಿಗೆ,

ಜನೋದಯ ಸಂಸ್ಥೆ
# 3, 5ನೇ ಮುಖ್ಯ ರಸ್ತೆ 9ನೇ ಅಡ್ಡ ರಸ್ತೆ
ಜಯಮಹಲ್ ಬಡಾವಣೆ, ಬೆಂಗಳೂರು –046
ದೂರವಾಣಿ ಸಂಖ್ಯೆ: 080–23332564 / 235577777
ಇಮೇಲ್: jano_dayatrust@dataone.in
ಅಂತರ್ಜಾಲ:www.janodaya.org

# ಮುನ್ನುಡಿ



ಜನೋದಯ ಸಂಸ್ಥೆಯ ಗ್ರಾಮಾಭಿವೃದ್ಧಿ ಯೋಜನೆಗಳು 1994 ರಿಂದ ಅಳವಡಿಸಿಕೊಳ್ಳಲಾಗಿದ್ದು; ಮಹಿಳಾ ಸಂಘಗಳು, ಕೂಟಗಳು, ಉಳಿತಾಯ ಯೋಜನೆ, ಸ್ವ ಸಹಾಯ ಗುಂಪುಗಳು, ಕೃಷಿ, ಹೈನುಗಾರಿಕೆ, ರೇಷ್ಮೆ ಹುಳು ಸಾಕಣೆ, ತೋಟಗಾರಿಕೆ ತರಬೇತಿಗಳು ಮತ್ತು ಸಣ್ಣ ಸಾಲದ ವ್ಯವಸ್ಥೆಗಳಿಂದ, ಗ್ರಾಮ ಯೋಜನೆಗಳನ್ನು ಪ್ರೋತ್ಸಾಹಿಸಲಾಯಿತು.

ಕೃಷಿ ರೈತರ ಬಡತನ, ಉತ್ಪನ್ನಗಳ ನಾಶ, ಬರಗಾಲ, ಪ್ರವಾಹ, ಕೀಟಗಳಿಂದ ಬೆಳೆ ನಾಶ, ರಸಗೊಬ್ಬರದ ಕೊರತೆ, ಸಾಲ ಮರುಪಾವತಿಸಲಾಗದೆ ರೈತರ ಆತ್ಮಹತ್ಯೆಗಳು, ಮತ್ತು ಮಾರುಕಟ್ಟೆಯಲ್ಲಿ ನ್ಯಾಯ ಬೆಲೆ ಸಿಗದ ಹಿನ್ನೆಲೆಯಲ್ಲಿ, ಜನೋದಯ ಸಂಸ್ಥೆಯ ಸಾವಯುವ ಕೃಷಿ ಅಳವಡಿಕೆಯ ಯೋಜನೆಗೆ ಮೂಲ ಕಾರಣಗಳಾದವು.

ವಿಷಪೂರಿತ / ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಉಪಯೋಗದಿಂದ ರೈತರ ಆರ್ಥಿಕ ಸುಧಾರಣೆ; ರೈತರ ನೆಲ, ಜಲ ಮತ್ತು ವಾತಾವರಣದ ಶುದ್ಧೀಕರಣ; ಭೂಮಿಯ ಸಂಪನ್ಮೂಲಗಳ ರಕ್ಷಣೆ ಅಸಾಧ್ಯವಾಗಿದ್ದು; ಜನೋದಯ ಸಂಸ್ಥೆ ಹಾಗೂ ರೈತರ ಸಹಭಾಗಿತ್ವದಲ್ಲಿ ಸಾವಯುವ ಕೃಷಿ ಅಳವಡಿಕೆ, ಮಾರಾಟ ಹಾಗೂ ಉದ್ಯಮಿಕರಣದ ಸಾವಯುವ ಕೃಷಿ ರೈತರ ಹಾಗೂ ಪ್ರೋತ್ಸಾಹಿತರ ಸಂಘಟಿತರನ್ನು ನೊಂದಣಿಸಲು ಈ ಕಾರ್ಯಕ್ರಮದ ಮುಂದಿನ ಹೆಜ್ಜೆಯಾಗಿದೆ.

ನಿಮ್ಮ ಸಹಕಾರ ಹಾಗೂ ಮಾನ್ಯತೆ ಈ ಕಾರ್ಯಕ್ರಮಕ್ಕೆ ಅಗತ್ಯವಾಗಿದ್ದು, ನಿಮ್ಮನ್ನು ಆಹ್ವಾನಿಸುತ್ತಾ ಈ ಯೋಜನೆಯ ಸಫಲತೆಗೆ ಶುಭ ಹಾರೈಸುತ್ತೇನೆ.

ಇಂತಿ ತಮ್ಮ ವಿಶ್ವಾಸಿ

**ಟಿ. ಪ್ರಭಾಕರ್**
ಉಪಾಧ್ಯಕ್ಷರು
ಜನೋದಯ ಸಂಸ್ಥೆ
ಬೆಂಗಳೂರು

# ಸಾವಯುವ ಕೃಷಿ ಉತ್ಪನ್ನಗಳ ಪರಿಚಯ

ಸಾವಯುವ ಕೃಷಿ ಎಂಬ ಮಾತು ಹಿಂದಿಗಿಂತ ಇಂದು ಹೆಚ್ಚು ಕೇಳಿಬರುತ್ತಿದೆ. ರಾಸಾಯನಿಕ ಕೃಷಿ ಅವಾಂತರಗಳಿಂದ ನಲುಗಿದ ರೈತರು, ಹೆಚ್ಚಿನ ಸಂಖ್ಯೆಯಲ್ಲಿ ಸಾವಯುವ ಕೃಷಿಯತ್ತ ಹೆಜ್ಜೆ ಹಾಕುತ್ತಿದ್ದಾರೆ. ಹೆಚ್ಚು ಇಳುವರಿ ಪಡೆಯುವ ಹಂಬಲದಲ್ಲಿ ಕಳೆದ ೩ – ೪ ದಶಕಗಳಿಂದ, ಹಲವಾರು ರೈತರು ಆಧುನಿಕ ಕೃಷಿಯನ್ನು ಕೈಗೊಂಡು, ಮಣ್ಣಿನ ಆರೋಗ್ಯ ಕೆಡಿಸಿರುವುದಲ್ಲದೆ ಆಹಾರ ವಸ್ತುಗಳ ಗುಣಮಟ್ಟ ಇಳಿಮುಖವಾಗಿರುವುದು ಒಂದು ಕಡೆಯಾದರೆ; ಇವುಗಳ ಬಳಕೆಯಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ನಮ್ಮ ಜನರಲ್ಲಿ ತಿಳುವಳಿಕೆ ಮೂಡದಿರುವುದು ಮತ್ತೊಂದು ಕಡೆ ಇದರ ಪರಿಣಾಮವಾಗಿ ಕಂಡು ಬರುತ್ತಿದೆ.

ರಾಸಾಯನಿಕ ಕೃಷಿಯಿಂದ ಆಹಾರ ಧಾನ್ಯಗಳ ಉತ್ಪನ್ನ ಹೆಚ್ಚಾಗಿದ್ದು, ನಮ್ಮ ದೇಶದ ಹೆಚ್ಚುತ್ತಿರುವ ಜನಸಂಖ್ಯೆಯ ಆಹಾರ ಪೂರೈಕೆಯ ವ್ಯವಸ್ಥೆಯನ್ನು ಕಾಪಾಡುತ್ತಿದ್ದರು. ಆದರೆ ರಾಸಾಯನಿಕ ಪದ್ಧತಿಗಳ ಉಪಯೋಗದಿಂದ ದೇಶದ ನೆಲ, ಜಲ, ವಾಯು ಹಾಗೂ ವಾತಾವರಣ ವಿಷಪೂರಿತವಾಗಿ ಬದಲಾವಣೆ ಹೊಂದಿದ್ದು ಇದರ ಪರಿಣಾಮವಾಗಿ ಅನಾಹುತಗಳು ಹೆಚ್ಚಾಗಿದ್ದು, ಜನರ ಜೀವನದಲ್ಲಿ ಅನಾರೋಗ್ಯದ ಲಕ್ಷಣಗಳು, ಹೆಸರಿಲ್ಲದ ಕಾಯಿಲೆಗಳು ಮತ್ತು ಅದರ ದುಷ್ಪರಿಣಾಮಗಳು ಅತಿಯಾಗಿ ಕಂಡು ಬರುತ್ತಿವೆ.

ತಿಳುವಳಿಕೆವುಳ್ಳ ಸಮಾಜವು, ಈ ಅನಾಹುತಗಳಿಂದ ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು, ಆಹಾರ ಪದಾರ್ಥಗಳ ಗುಣಮಟ್ಟ ಕಾಪಾಡಿಕೊಂಡು ಬರಲು, ಪ್ರಕೃತಿದತ್ತವಾದ ಮಣ್ಣು, ನೀರು, ವಾತಾವರಣ ಕೆಡುವುದನ್ನು ನಿಯಂತ್ರಿಸುವ ದೃಷ್ಟಿಯಿಂದ, ಸಾವಯುವ ಬೇಸಾಯದ ಕಡೆ ಗಮನಹರಿಸುತ್ತಿದೆ. ನಮ್ಮ ದೇಶದಲ್ಲಿ ಹಾಗೂ ಇತರ ಅನೇಕ ದೇಶಗಳಲ್ಲಿ ಸಾವಯುವ ಬೇಸಾಯದ ಬೆಳೆಗಳಿಗೆ ಬೇಡಿಕೆ ಇರುವುದರಿಂದ, ಅವುಗಳ ಪೂರೈಕೆಯ ಮೂಲಕ ಹೆಚ್ಚಿನ ಹಣ ಗಳಿಸುವ ಸಾಧ್ಯತೆಯಿರುವುದರಿಂದ; ಸಾವಯುವ ಕೃಷಿ, ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ.

**ರೈತರನ್ನು ತಮ್ಮ ಬಡತನದಿಂದ ಮುಕ್ತಿಗೊಳಿಸಲು ಮತ್ತು ಸಾವಯುವ ಕೃಷಿ ಉತ್ಪಾದನೆಯಿಂದ, ಮಾರಾಟದಿಂದ ಹಾಗೂ ಉದ್ಯಮೀಕರಣದಿಂದ ತಮ್ಮ ಬಡತನದ ಸುಧಾರಣೆ, ಆರ್ಥಿಕ ಸಶಕ್ತೀಕರಣ ಹಾಗೂ ಬಳಕೆದಾರರನ್ನು ಅನಾಹುತಗಳಿಂದ ರಕ್ಷಿಸಿ, ವಿಷರಹಿತ ಆಹಾರವನ್ನು ಒದಗಿಸಿ ಅವರ ಆರೋಗ್ಯವನ್ನು ಕಾಪಾಡುವಲ್ಲಿ ಹಾಗೂ ಭೂಮಿಯನ್ನು ರಕ್ಷಿಸುವ ಸಲುವಾಗಿ ಈ ಯೋಜನೆಯನ್ನು ಅಳವಡಿಸಲಾಗಿದೆ.**



**ರಾಜ್ಯ ಹೆದ್ದಾರಿಯಲ್ಲಿ ಸಾವಯುವ ರೈತರ ಮಾರುಕಟ್ಟೆ**

## ಸಾವಯುವ ಕೃಷಿ ಉತ್ಪನ್ನದಲ್ಲಿ ಜನೋದಯ ಸಂಸ್ಥೆಯ ಪಾತ್ರ:-

೨೦೦೨ ನೇ ವರ್ಷದಿಂದ ಜನೋದಯು ಸಂಸ್ಥೆಯು ಸಣ್ಣ ಮತ್ತು ಬಡ ರೈತರನ್ನು ಗುರುತಿಸಿ, ಬೆಂಗಳೂರು ಗ್ರಾಮಾಂತರ, ಮಾಗಡಿ, ಕೋಲಾರ, ಕನಕಪುರ, ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಹಳ್ಳಿಗಳಲ್ಲಿ ಕೃಷಿ ಭೂಮಿಯನ್ನು ಸಾವಯುವ ಗ್ರಾಮ ಯೋಜನೆಯಡಿಯಲ್ಲಿ ತರಲು, ಹಲವಾರು ಯೋಜನೆಗಳನ್ನು ನಿರೂಪಿಸಿತು. ಇವುಗಳಲ್ಲಿ ಮುಖ್ಯವಾಗಿ:-



ಬಳಕೆದಾರರಿಗೆ ತಿಳುವಳಿಕಾ ಕಾರ್ಯಕ್ರಮ

1. ಸಾವಯುವ ಕೃಷಿ ಉತ್ಪನ್ನಕ್ಕೆ ಭೂಮಿಯನ್ನು ಗುರುತಿಸುವುದು ಮತ್ತು ಪರಿಶೀಲಿಸುವುದು.
2. ಭೂಮಿಯ ಫಲವತ್ತತೆ ಹಾಗೂ ರಾಸಾಯನಿಕ ಅಂಶಗಳ ಬಗ್ಗೆ ತಿಳುವಳಿಕೆ ಕಾರ್ಯಕ್ರಮಗಳು.
3. ಸಾವಯುವ ಕೃಷಿ ಉತ್ಪನ್ನಗಳ ಬಗ್ಗೆ ತರಬೇತಿಗಳು ಹಾಗೂ ಅವುಗಳ ಖರ್ಚುಗಳು.
4. ಸಾವಯುವ ಕೃಷಿ ರೈತರಿಗೆ ಹೆಚ್ಚಿನ ತಿಳುವಳಿಕೆಗಾಗಿ ಅಧ್ಯಾಯನ ಪ್ರವಾಸಗಳು
5. ಸಾವಯುವ ಕೃಷಿ ಉತ್ಪನ್ನ ತೋಟಗಳಿಗೆ ಭೇಟಿ ಮಾಡಿ, ಸಲಹೆಗಳನ್ನು ನೀಡುವುದು.
6. ಕೃಷಿ ಇಲಾಖೆಯಿಂದ ಸಾವಯುವ ಕೃಷಿಯನ್ನು ಅಳವಡಿಸಲು ಉಪಯೋಗವಾಗುವಂತಹ ಪಾಠ ಪ್ರತಿಗಳ ಹಂಚಿಕೆ.
7. ರೈತ ಕೇಂದ್ರಗಳ ಸಂಪರ್ಕ
8. ಸರ್ಕಾರಿ ಯೋಜನೆಗಳಲ್ಲಿ ಲಭಿಸುವಂತಹ ಸೌಕರ್ಯಗಳು ಹಾಗೂ ಪರಿಕರಗಳು.
9. ಜನೋದಯ ಸಂಸ್ಥೆಯಿಂದ ಪ್ರೋತ್ಸಾಹ ಕಾರ್ಯಕ್ರಮಗಳು ಮತ್ತು ಸಿಬ್ಬಂದಿ ವರ್ಗಗಳ ನಿಯೋಜನೆ.



ಬಳಕೆದಾರರಿಗೆ ಸಾವಯುವ ಕೃಷಿ ತೋಟಕ್ಕೆ ಭೇಟಿ

೨೦೦೪ ನೇ ಇಸವಿಯಿಂದ ಜನೋದಯು ಸಂಸ್ಥೆಯು, ರಾಸಾಯನಿಕ ಕೃಷಿ ಭೂಮಿಯನ್ನು ಸಾವಯುವ ಕೃಷಿ ಭೂಮಿಯನ್ನಾಗಿ ಪರಿವರ್ತಿಸಿದ ಭೂಮಿಯಿಂದ ಸುಮಾರು ೩೫೦೦೦ ದಿಂದ ೪೦೦೦೦ ಕೆ,ಜಿಯಷ್ಟು ಸಾವಯುವ ಉತ್ಪನ್ನಗಳಾದ ತರಕಾರಿ, ಹಣ್ಣು ಹಂಪಲುಗಳು ಹಾಗೂ ಧಾನ್ಯಗಳನ್ನು, ೨೩.೨೫ ರೈತರಿಂದ, ೧೮೦೦ ಎಕರೆ ಜಮೀನಿನಿಂದ ಪ್ರತೀ ವರ್ಷ ಪಡೆದುಕೊಳ್ಳುತ್ತಿದ್ದು, ಈ ಉತ್ಪನ್ನಗಳನ್ನು ೩೫೦೦ ರಷ್ಟು ಬಳಕೆದಾರರಿಗೆ ಒದಗಿಸುವ ಸಲುವಾಗಿ, ಜನೋದಯು ಸಂಸ್ಥೆಯಿಂದ ಪರ್ಯಾಯ ಮಾರುಕಟ್ಟೆಯ ವ್ಯವಸ್ಥೆಯನ್ನು ಮಾಡಲಾಗಿದೆ.

## ಸಾವಯುವ ಕೃಷಿ ಯೋಜನೆಯಲ್ಲಿ, ಉತ್ಪನ್ನ ಮಾಡಲಾದ ಸಾವಯುವ ಉತ್ಪನ್ನಗಳು

| ಸಾವಯುವ ಕೃಷಿಯನ್ನು ಅಳವಡಿಸಿಕೊಂಡಿರುವ ಜಿಲ್ಲೆಗಳು/ತಾಲ್ಲೂಕುಗಳು | ಹಳ್ಳಿಗಳ ಸಂಖ್ಯೆ | ರೈತರ ಸಂಖ್ಯೆ | ಸಾವಯುವ ಕೃಷಿಯನ್ನೊಳಗೊಂಡ ಭೂಮಿಯ ವಿಸ್ತೀರ್ಣ | ಉತ್ಪಾದನೆಗಳು |
|---|---|---|---|---|
| ದೇವನಹಳ್ಳಿ | ೦೭ | ೩೦೦ | ೧೩೩ | ಭತ್ತ<br>ರಾಗಿ<br>ತರಕಾರಿಗಳು<br>ಹಣ್ಣುಗಳು |
| ದೊಡ್ಡಬಳ್ಳಾಪುರ | ೦೮ | ೩೨೬ | ೧೪೧ | ಭತ್ತ<br>ರಾಗಿ<br>ತರಕಾರಿಗಳು |
| ಹೊಸಕೋಟೆ | ೦೩ | ೨೫೦ | ೪೩ | ಭತ್ತ<br>ರಾಗಿ<br>ತರಕಾರಿಗಳು<br>ಹಣ್ಣುಗಳು |
| ಮಾಗಡಿ | ೦೫ | ೧೨೮ | ೯೯ | ಭತ್ತ<br>ರಾಗಿ<br>ತರಕಾರಿಗಳು |
| ಗೌರಿಬಿದನೂರು | ೦೩ | ೧೬೦ | ೪೯ | ಭತ್ತ<br>ರಾಗಿ<br>ತರಕಾರಿಗಳು |
| ಬೆಂಗಳೂರು – ಉತ್ತರ | ೦೫ | ೭೮ | ೨೫೮ | ಭತ್ತ<br>ರಾಗಿ<br>ತರಕಾರಿಗಳು |
| ಬೆಂಗಳೂರು ದಕ್ಷಿಣ | ೦೪ | ೬೦ | ೩೫ | ಭತ್ತ<br>ರಾಗಿ<br>ತರಕಾರಿಗಳು |
| ಹುಬ್ಬಳ್ಳಿ / ಧಾರಾವಾಡ | ೦೩ | ೪೮ | ೫೬೦ | ಭತ್ತ<br>ರಾಗಿ<br>ತರಕಾರಿಗಳು |
| ಕೋಲಾರ - ಮುಳಬಾಗಿಲು ಮತ್ತು ಶ್ರೀನಿವಾಸಪುರ | ೦೬ | ೧೫೦ | ೪೧೪ | ಭತ್ತ<br>ರಾಗಿ<br>ತರಕಾರಿಗಳು |

## ಪ್ರಶಂಸನೀಯ ರೈತರೊಬ್ಬರ ಸಾವಯುವ ಕೃಷಿಯನ್ನವಲಂಬಿಸಿ ಪ್ರಗತಿ ಹೊಂದಿರುವ – ವರದಿ


ಜತೆ ಮಿತ್ರ ಬೆಳೆ

ಪರ್ಯಾಯ ಮಾರುಕಟ್ಟೆ ವ್ಯವಸ್ಥೆಯಲ್ಲಿ ಹೆಚ್ಚು ಪ್ರಮಾಣದ ಉತ್ಪನ್ನದಾರರು ಸಾವಯವ ಉತ್ಪನ್ನಗಳನ್ನು ಪರದೇಶದಿಂದ ನುಯಮಿಸಲ್ಪಟ್ಟ ದೃಢೀಕರಣ ಪತ್ರವನ್ನು ಹೊಂದಿ, ತಮ್ಮ ಉತ್ಪನ್ನಗಳನ್ನು ರಫ್ತು ಮಾಡುತ್ತಾರೆ. ಆದರೆ ಸಣ್ಣ ಮತ್ತು ಬಡ ರೈತರು ಚಿಕ್ಕ ಭೂಮಿಯನ್ನು ಹೊಂದಿದ್ದು, ಅತೀ ಹೆಚ್ಚಿನ ದರ ಕೊಟ್ಟು ದೃಢೀಕರಣ ಪತ್ರವನ್ನು ಪಡೆಯಲಾಗದ ಕಾರಣದಿಂದ, ಅವರ ಉತ್ಪನ್ನಗಳು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗಬೇಕಾದ ವ್ಯವಸ್ಥೆಯಲ್ಲಿ, ರೈತರಿಗೆ ನ್ಯಾಯ ಬೆಲೆ ಸಿಗುವ ಸಾಧ್ಯತೆ ಇರಲಿಲ್ಲ.

ಈ ಹಿನ್ನೆಲೆಯಲ್ಲಿ ಜನೋದಯ ಸಂಸ್ಥೆಯು ತಮ್ಮ ಯೋಜನೆಯಲ್ಲಿ, ರೈತರನ್ನು ಬಲಪಡಿಸಲು ಹಾಗೂ ತಮ್ಮ ಸಾವಯವ ಉತ್ಪನ್ನಗಳಿಗೆ ನ್ಯಾಯವಾದ ಬೆಲೆಯನ್ನು [illegible] ಮಾರುಕಟ್ಟೆ ವ್ಯವಸ್ಥೆಯನ್ನು ನಿರೂಪಿಸಲಾಯಿತು.

## ಜನೋದಯ - ಪರ್ಯಾಯ ಮಾರುಕಟ್ಟೆ



ಸಂಚಾರಿ ವಾಹನದ ಮಾರಾಟ ಮಳಿಗೆ



ಪಯ

ಸಣ್ಣ ಮತ್ತು ಬಡ ರೈತರು ತಮ್ಮ ಭೂಮಿಯಲ್ಲಿ ಬೆಳೆದ ಅಲ್ಪ ಪ್ರಮಾಣದ ಉತ್ಪನ್ನಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ, ನ್ಯಾಯವಾದ ಬೆಲೆಯಲ್ಲಿ ಮಾರಾಟ ಮಾಡಲಾಗದೆ, ಕಡಿಮೆ ಬೆಲೆಯಲ್ಲಿ ತಮ್ಮ ಉತ್ಪನ್ನಗಳನ್ನು ಮಧ್ಯವರ್ತಿಗಳ ಮುಖಾಂತರ ಮಾರಾಟ ಮಾಡುತ್ತಾರೆ. ಈ ವ್ಯವಸ್ಥೆಯಲ್ಲಿ ರೈತರಿಗೆ ಸಿಗುವ ಬೆಲೆಯು ತಮ್ಮ ಆರ್ಥಿಕ ಸುಧಾರಣೆಗೆ ಸಾಕಾಗದೆ, ಸಾವಯವ ಕೃಷಿಗೆ ಪ್ರಾಮಾಣಿಕತೆಯನ್ನು ಉಳಿಸಿಕೊಂಡು, ಉತ್ಪನ್ನಗಳ ಹೆಚ್ಚಳವನ್ನು ಪ್ರೋತ್ಸಾಹಿಸಿ, ಬಳಕೆದಾರರ ಅಗತ್ಯಗಳನ್ನು ಪೂರೈಸುವ ಸಲುವಾಗಿ, ಕಾರ್ಯರೂಪಣೆಯಲ್ಲಿ ನ್ಯಾಯಬೆಲೆ ಮಾರುಕಟ್ಟೆಯ ವ್ಯವಸ್ಥೆಯನ್ನು ಮಾಡಲಾಗಿದೆ.

ಈ ಕಾರ್ಯ ಯೋಜನೆಯಲ್ಲಿ ರೈತರ ಉತ್ಪನ್ನಗಳನ್ನು, ಅವರ ತೋಟಗಳಿಂದ ಜನೋದಯ ಮಾರಾಟ ವಾಹನಗಳ ಮುಖಾಂತರ ಪಡೆದುಕೊಂಡು, ನ್ಯಾಯಬೆಲೆ ಮಾರುಕಟ್ಟೆಗೆ ಸರಬರಾಜು ಮಾಡಿ, ರೈತರ ಆರ್ಥಿಕ ಸುಧಾರಣೆಗೆ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.



ತ್ವ ದೃಢೀಕರಣ ಪದ್ಧತಿ” (ಔಉಖ):-

ಸಾವಯವ ಕೃಷಿ ಯೋಜನೆಯನ್ನು ರಾಷ್ಟ್ರೀಯ ಮಟ್ಟದ ಕೃಷಿ ಇಲಾಖೆಯಲ್ಲಿ ಸ್ವೀಕರಿಸಲ್ಪಟ್ಟಿದ್ದು, ಅಳವಡಿಸಲು ಸರ್ಕಾರವು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಪರದೇಶದಲ್ಲಿ ಅಧಿಕೃತವಾಗಿ ಸ್ವೀಕರಿಸಿದ ದೃಢಿಕರಣ ಪದ್ಧತಿಯಲ್ಲಿ ಹಾಗೂ ರಫ್ತು ಮಾರುಕಟ್ಟೆಯಲ್ಲಿ, ಸಣ್ಣ ಮತ್ತು ಬಡ ರೈತರಿಗೆ ಅವಕಾಶವಿಲ್ಲದಿದ್ದುದರಿಂದ, ಸರ್ಕಾರವು ಸಣ್ಣ ರೈತರ ದೃಢೀಕರಣ ಪದ್ದತಿಗೆ "ಸಹಭಾಗಿತ್ವ ದೃಢೀಕರಣ ಪದ್ಧತಿ" ಎಂಬ ಪ್ರಮಾಣ ಪತ್ರವನ್ನು ನೀಡಲು ಕೆಲವು ನಿಯಮಾವಳಿಗಳನ್ನು ಸೂಚಿಸಿದೆ. ಈ ನಿಯಮಾವಳಿಗಳಿಗೆ ಅನುಗುಣವಾಗಿ ರಾಸಾಯನಿಕ ಕೃಷಿ ಭೂಮಿಯನ್ನು ಸಾವಯವ ಭೂಮಿಯಾಗಿ ಪರಿವರ್ತನೆ ಹೊಂದಲು ಸೂಚಿಸಲಾಗಿದ್ದು, ೩ ವರ್ಷ ಕಾಲಾವಧಿಯಲ್ಲಿ, ಸಹಭಾಗಿತ್ವ ದೃಢೀಕರಣಕ್ಕೆ ಮನ್ನಣೆ ಪಡೆಯಲು ಅವಧಿಯನ್ನು ನಿಯಮಿಸಲಾಗಿದೆ.

ಸಹಭಾಗಿತ್ವ ದೃಢೀಕರಣ ಪದ್ಧತಿ, ರೈತರ ಹಕ್ಕು. ಈ ಹಕ್ಕಿನಲ್ಲಿ ಸಾವಯವ ಕೃಷಿಕ ರೈತರು ಗುಂಪುಗಳಲ್ಲಿ ಸದಸ್ಯತ್ವ ಪಡೆದು, ತಮ್ಮ ಉತ್ಪನ್ನಗಳಿಗೆ ತಾವೇ ದೃಢೀಕರಣ ಪತ್ರವನ್ನು ನೀಡುವುದನ್ನು ತೀರ್ಮಾನಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ರೈತರು ಇಟ್ಟುಕೊಂಡಿದ್ದು, ಸರ್ಕಾರಿ ಅಧಿಕಾರಿಗಳಿಗೆ ಹಾಗೂ ಬಳಕೆದಾರರಿಗೆ ಉತ್ಪನ್ನಗಳ ಬಗ್ಗೆ ಸಮರ್ಥಿಸಲು ಉಪಯೋಗಿಸಲಾಗುವುದು.







**ಸಾವಯವ ಕೃಷಿಯಲ್ಲಿ ಸಹಭಾಗಿತ್ವ ಉತ್ಪನ್ನದಲ್ಲಿ ಬಳಸುವ ರೈತರ ದಿನಚರಿ ದಾಖಲೆ ಪುಸ್ತಕ**

ಸಹಭಾಗಿತ್ವ ದೃಢೀಕರಣ ಪದ್ಧತಿಯಲ್ಲಿ (ಪಿ.ಜಿ.ಎಸ್) ಸಾವಯವ ರೈತರು ದೃಢೀಕರಣ ಪ್ರಕ್ರಿಯೆಯ ಮೇಲೆ ನಿಯಂತ್ರಣ ಹೊಂದುತ್ತಾರೆ ಮತ್ತು ಗುಣಮಟ್ಟ ಖಾತ್ರಿಯಲ್ಲಿ ಮೂರನೆಯವರ ದೃಢೀಕರಣದಲ್ಲಿಯಕ್ಕಿಂತ ಪಿ.ಜಿ.ಎಸ್ ನಲ್ಲಿ ಸಾಕಷ್ಟು ವಿಶ್ವಾಸಾರ್ಹವೂ, ಪರಿಣಾಮಕಾರಿಯೂ ಆದ ಪದ್ಧತಿಯನ್ನು ರೂಪಿಸಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ಮೂರನೆಯವರು ಮಾಡುವ ದೃಢೀಕರಣ ಅಷ್ಟೊಂದು ವಿಶ್ವಾಸಾರ್ಹವಾಗಿರುವುದಿಲ್ಲ. ಗಟ್ಟಿತನವಿಲ್ಲದೆ, ತರಾತುರಿಯ ಪರಿಶೀಲನೆ ಮಾತ್ರವಲ್ಲ; ಕೆಲವು ಸಂದರ್ಭಗಳಲ್ಲಿ ಭ್ರಷ್ಟತೆ ಇದ್ದಿರುವ ನಿದರ್ಶನಗಳೂ ಕಂಡುಬರುತ್ತವೆ.

ಸಹಭಾಗಿತ್ವದ ಖಾತ್ರಿ ಪದ್ಧತಿ ಎನ್ನುವುದು ಇತ್ತೀಚಿನ ವರ್ಷಗಳಲ್ಲಿ ಪ್ರಪಂಚದಾದ್ಯಂತ ಪ್ರಚಲಿತಕ್ಕೆ ಬರುತ್ತಿರುವಂತದ್ದು. ಇದು ಈಗಾಗಲೇ ಬ್ರೆಜಿಲ್, ಯು.ಎ.ಎಸ್ (ಅಮೇರಿಕಾದ ರಾಷ್ಟ್ರಗಳು) ಮತ್ತು ನ್ಯೂಜಿಲ್ಯಾಂಡ್‌ಗಳಲ್ಲಿ ಚುರುಕಾಗಿ ಬಳಕೆಯಾಗುತ್ತಿದ್ದು; ಭಾರತದಲ್ಲಿಯೂ ಸಾವಯವ ದೃಢೀಕರಣದ ಮುಖ್ಯ ಪದ್ಧತಿಯಾಗಿದೆ. ಈ ಪದ್ಧತಿಯಿಂದಾಗಿ ಸಾವಯವ ರೈತರು ತೀರಾ ದುಬಾರಿಯಾದುದ್ದಲ್ಲದೆ, ಅನಾವಶ್ಯಕವಾದ ಮೂರನೆಯವರ (ಥರ್ಡ್ ಪಾರ್ಟಿ) ದೃಢೀಕರಣದ ಮೇಲೆ ಅವಲಂಭಿಸುವುದು ತಪ್ಪುತ್ತದೆ.

ಪಿ.ಜಿ.ಎಸ್ ವ್ಯವಸ್ಥೆ ಮೂರನೆಯವರ ದೃಢಿಕರಣದ ವ್ಯವಸ್ಥೆಗಿಂತ, ಸಾವಯವ ರೈತರಿಗೆ ಅನೇಕ ರೀತಿಯಲ್ಲಿ ಅನುಕೂಲವಾಗಿರುವುದರಿಂದ, ಅದು ಚಾಲ್ತಿಗೆ ಬಂದಾಗಿನಿಂದಲೂ, ರೈತರು ಪಿ.ಜಿ.ಎಸ್ ಬಗ್ಗೆ ತುಂಬಾ ಆಸಕ್ತಿ ತೋರುತ್ತಾ ಬಂದಿರುವುದಕ್ಕೆ ಮುಖ್ಯ ಕಾರಣಗಳು ಈ ಕೆಳಕಂಡಂತಿವೆ:-

೧. ಇಲ್ಲಿನ ಕ್ರಮಗಳು ಸರಳವಾಗಿವೆ ಹಾಗೂ ಅವಶ್ಯಕ ದಾಖಲೆಗಳನ್ನು ಮಾತ್ರ ಇದು ಬಯಸುತ್ತದೆ ಮತ್ತು ಎಲ್ಲಾ ದಾಖಲೆಗಳು ಆಯಾ ಪ್ರದೇಶದ ರೈತರಿಗೆ ಅನ್ವಯಿಸುವ ಭಾಷೆಯಲ್ಲಿ ಇರುತ್ತವೆ.
೨. ಪಿ.ಜಿ.ಎಸ್ ಪದ್ಧತಿಯು ವಿಶೇಷವಾಗಿ ಸಣ್ಣ ಮತ್ತು ಬಡ ರೈತರಿಗೆ ಹೇಳಿ ಮಾಡಿಸಿದಂತಿದೆ. ಹಾಗಿಲ್ಲದಿದ್ದರೆ, ಅವರು ದೃಢೀಕರಣ ಪ್ರಕ್ರಿಯೆಯಿಂದ ಹೊರಗುಳಿದು ಬಿಡುತ್ತಾರೆ.
೩. ಈ ಪದ್ಧತಿಯಲ್ಲಿ ದೃಢೀಕರಣ, ರೈತರ ಕೈಯಲ್ಲಿರುತ್ತದೆ. ಸಾಮಾನ್ಯವಾಗಿ ಪಟ್ಟಣದವರಾದ ಅಥವಾ ಕೃಷಿಕರಲ್ಲದವರ ಅಧೀನದಲ್ಲಿ ಇರುವುದಿಲ್ಲ.
೪. ಪಿ.ಜಿ.ಎಸ್ ಪದ್ಧತಿಯು ವೈಯಕ್ತಿಕ ನಂಬಿಕೆ ಮತ್ತು “ಜ್ಞಾನವನ್ನು ಆಧರಿಸಿದೆ. ಆದುದರಿಂದ ಇಲ್ಲಿ ಲಿಖಿತ ದಾಖಲಾತಿ ಕೆಲಸ ಸಾಕಷ್ಟು ಕಡಿಮೆ ಇರುತ್ತದೆ.

ಹೀಗೆ ಮೇಲಿನ ಎಲ್ಲಾ ಮತ್ತು ಇನ್ನಷ್ಟು ಹಲವಾರು ಕಾರಣಗಳಿಂದ ಸಾವಯುವ ಕೃಷಿ ದೃಢೀಕರಣದಲ್ಲಿ ಪಿ.ಜಿ.ಎಸ್ ಸಾಕಷ್ಟು ವಿಶ್ವಾಸಾರ್ಹ ಎನಿಸಿದ್ದು, ಪ್ರಪಂಚಾದ್ಯಂತ ಸಾವಯುವ ಕೃಷಿ ಚಳುವಳಿಯಲ್ಲಿ ಇದು ಪ್ರಚಲಿತಗೊಳ್ಳುತ್ತಿದೆ. ಈಗ ಖಈಔಂಒ ಮತ್ತು ಈಂಔಗಳು ಈ ಪದ್ಧತಿಯನ್ನು ಅಧಿಕೃತವಾಗಿ ಅನುಮೋದಿಸಿವೆ. ಭಾರತ ಸರ್ಕಾರ ಇದನ್ನು ಅನುಮೋದಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿದ್ದು; ಬೇರೆ ಬೇರೆ ರಾಜ್ಯ ಸರ್ಕಾರಗಳೊಂದಿಗೆ ಕಾರ್ಯಗಾರಗಳನ್ನು ಏರ್ಪಡಿಸಿದ್ದು, ಚರ್ಚೆಗಳೊಂದಿಗೆ ರೈತರ ಸಲಹೆಗಳನ್ನು ಪಡೆದು, ಅನುಮೋದನೆಯಲ್ಲಿ ತರಲು ಪ್ರಯತ್ನಗಳು ನಡೆಯುತ್ತವೆ.

**ಜನೋದಯ ಸಂಸ್ಥೆಯ ಸಹಕಾರದಿಂದ ಮೂಡಿದ ಪಿ.ಜಿ.ಎಸ್ ಗುಂಪುಗಳು**

| ಒಟ್ಟು ಗುಂಪುಗಳು | ಹಳ್ಳಿಗಳ ಸಂಖ್ಯೆ | ಸದಸ್ಯರ ಸಂಖ್ಯೆ | ಯೋಜಿಸಲಾದ ಗುಂಪಿನ ಉದ್ಯಮ |
|---|---|---|---|
| ೨೦ | ೧೫ | ೪೦೦ | • ತೊಗರಿ ಕಾಳನ್ನು ಬೇಳೆಯನ್ನಾಗಿ ಪರಿವರ್ತಿಸಿ, ಒಕ್ಕೂಟದ ಮುಖಾಂತರ ಮಾರಾಟ ಮಾಡುವುದು<br>• ಮಾವಿನ ಮತ್ತು ತೋಮಾತೊಗಳ ಉಪ್ಪಿನಕಾಯಿ, ಗೊಜ್ಜುಗಳು ಮತ್ತು ಚಟ್ನಿಗಳನ್ನು ಮಾಡಿ ಒಕ್ಕೂಟದ ಮುಖಾಂತರ ಮಾರಾಟ ಮಾಡುವುದು. |



ಗೌರಿಬಿದನೂರು ತಾಲೂಕಿನಲ್ಲಿ ರಚಿಸಲಾದ ಎರಡು ಸಾವಯುವ ರೈತರ ಕೂಟಗಳು

**ಪ್ರಮಾಣೀಕರಿಸಲ್ಪಟ್ಟ, [illegible] ಮಳಿಗೆಗಳಿಗೆ ವಾಹನದಲ್ಲಿ ಒದಗಿಸುವ ಮೂಲಕ ಉತ್ಪಾದಕರಿಗೆ ನ್ಯಾಯಬೆಲೆಯನ್ನು ದೊರಕಿಸಿಕೊಡುತ್ತಿದೆ.**

೨೦೦೪ – ೦೫ ನೇ ವರ್ಷದಿಂದ ಸಾವಯುವ ರೈತರ ಉತ್ಪಾದನೆಗಳನ್ನು ಜನೋದಯ ಸಂಸ್ಥೆಯು ನೊಂದಣಿ ಮಾಡಿದ ಬಳಕೆದಾರರಿಗೆ ಒದಗಿಸಲು ಜೆ.ಸಿ ರಸ್ತೆಯ ಮುನಿರೆಡ್ಡಿ ಪಾಳ್ಯದಲ್ಲಿ ಚಿಕ್ಕ ಮಾರಾಟ ಮಳಿಗೆಯನ್ನು ಸ್ಥಾಪಿಸಲಾಯಿತು. ಇಲ್ಲಿ ರೈತರ ಪರವಾಗಿ ಅವರ ಉತ್ಪಾದನೆಗಳನ್ನು ತಂದು, ಅದಕ್ಕೆ ತಗಲುವ ಸಾರಿಗೆ ಖರ್ಚನ್ನು ಜನೋದಯ ಸಂಸ್ಥೆಯು ಒದಗಿಸಿಕೊಡುವುದರಿಂದ, ರೈತರಿಗೆ ಅವರ ಉತ್ಪನ್ನಗಳಿಗೆ ನ್ಯಾಯಬೆಲೆ ದೊರಕಿಸಲು ಅನುಕೂಲ ಮಾಡಲಾಯಿತು.

ಸಾವಯುವ ಕೃಷಿ ಸರಬರಾಜು ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸಲು ಕಾರ್ಯಕ್ರಮವನ್ನು ಅಳವಡಿಸಿ, ರೈತರ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಲು ಹಾಗೂ ಉತ್ಪಾದನೆಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಗಾರವನ್ನು ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ಏರ್ಪಡಿಲಾಯಿತು.

ಗ್ರಾಹಕರ ತಿಳುವಳಿಕೆಗಾಗಿ ಎಖೋ ಫಾರ್ಮ್ (ಇಅಔ ಜಿಟಿಡಿಟ) ಭೇಟಿಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಗಳಲ್ಲಿ ವಿಷಪೂರಿತ ಆಹಾರದಿಂದ, ವಿಷರಹಿತ ಆಹಾರಕ್ಕೆ ಸಂಬಂಧಪಟ್ಟ ಹಾಗೂ ಉತ್ಪಾದನೆಯ ಯೋಜನೆಗಳನ್ನು ಗ್ರಾಹಕರಿಗೆ ತಿಳಿಸಲಾಯಿತು.

೨೦೦೭-೦೮ ನೇ ವರ್ಷದಿಂದ ಉತ್ಪನ್ನ ಮತ್ತು ಬಳಕೆದಾರರ ಸಂಪರ್ಕ ಕೇಂದ್ರಗಳು ಹಾಗೂ ಉತ್ಪಾದನೆ ಮತ್ತು ಬೇಡಿಕೆಗಳನ್ನು ಗಮನಿಸಿ, ಅದಕ್ಕೆ ಸೂಕ್ತವಾದ ಕಾರ್ಯಕ್ರಮಗಳನ್ನು ನಿಯೋಜಿಸಲಾಯಿತು. ಈ ಯೋಜನೆಯಲ್ಲಿ ರೈತರ ಉತ್ಪಾದನೆಗಳನ್ನು ಅವರ ಹಳ್ಳಿಗಳಿಂದ, ಜನೋದಯ ಸಂಸ್ಥೆಯಿಂದ ಈ ಯೋಜನೆಗೆಂದೇ ಮೀಸಲಾದ ಸಂಚಾರಿ ವಾಹನದ ಮೂಲಕ ಉತ್ಪನ್ನಗಳನ್ನು ಪಡೆದುಕೊಂಡು, ಸಂಸ್ಥೆಯಿಂದ ವ್ಯವಸ್ಥಿಸಲ್ಪಟ್ಟ ೮ ಮಾರಾಟ ಕೇಂದ್ರಗಳ ಮುಖಾಂತರ ಹಾಗೂ ಮಾರಾಟ ಮಳಿಗೆಗಳು, ಸ್ವಯಂ ಸೇವಾ ಸಂಸ್ಥೆಗಳ ಸಂಪರ್ಕ ಕೇಂದ್ರಗಳ ಮುಖಾಂತರ ಮಾರಾಟ ಮಾಡಿ; ರೈತರಿಗೆ ತಮ್ಮ ಉತ್ಪನ್ನಗಳಿಗೆ ನ್ಯಾಯ ಬೆಲೆಯನ್ನು ದೊರಕಿಸಿಕೊಡಲಾಗುತ್ತಿದೆ. ಹಾಗೆಯೇ ಸಂಚಾರಿ ವಾಹನದ ಮೂಲಕ, ಅಪಾರ್ಟ್‌ಮೆಂಟ್‌ನಲ್ಲಿರುವ ಬಳಕೆದಾರರಿಗೆ ನೇರವಾಗಿ ಉತ್ಪನ್ನಗಳನ್ನು ಒದಗಿಸುವ ಯೋಜನೆಯನ್ನು ಪ್ರಾರಂಭಿಸಲಾಯಿತು.




ಜನೋದಯ ಸಂಸ್ಥೆಯ ಸಾವಯುವ ಸಂಚಾರಿ ವಾಹನ

## ಸಾವಯುವ ಉತ್ಪನ್ನ - ಬಳಕೆದಾರರ ಪ್ರತಿಕ್ರಿಯೆ ಮತ್ತು ಅಭಿಪ್ರಾಯ:-

**“ಔಡಿದಚಿಟಿಛಿ ಃಚಿದಾಚಿಡಿ”** ಎಂಬ ಫಲಕ ಹೊತ್ತ ಜನೋದಯ ಸಂಸ್ಥೆಯ ಮಾರುತಿ ವ್ಯಾನ್ ನಮ್ಮ ಮನೆಯ ಮುಂದೆ ಓಡಾಡುತ್ತಿತ್ತು, ಸಹಜ ಕುತೂಹಲದಿಂದ ಹೋಗಿ ವಿಚಾರಿಸಲು, ವಾರಕ್ಕೊಂದು ದಿನ ಸಾವಯವ ಕೃಷಿ ವಿಧಾನದಲ್ಲಿ ಬೆಳೆಸಿದ ತರಕಾರಿ ಸರಬರಾಜು ಮಾಡುತ್ತಾರೆಂದು ತಿಳಿಯಿತು.

ಹಾಗೆ ಪ್ರಾರಂಭವಾಗಿ, ಕಳೆದ ಒಂದು ವರ್ಷದಿಂದ ನಾವು ಜನೋದಯ ಸಂಸ್ಥೆಯ ವತಿಯಿಂದ ಸಾವಯುವ ಕೃಷಿ ಆಧಾರಿತ ತರಕಾರಿ ಮತ್ತು ಹಣ್ಣುಗಳನ್ನು ಕೊಳ್ಳುತ್ತಿದ್ದೇವೆ.

ಇವರಲ್ಲಿ ಕೊಂಡ ತರಕಾರಿ, ಹಣ್ಣುಗಳು ತಮ್ಮ ನೈಸರ್ಗಿಕ ರುಚಿ ಮತ್ತು ಸುವಾಸನೆಯನ್ನು ಹೊಂದಿರುತ್ತದೆ. ಮುಖ್ಯವಾಗಿ ಇವರಲ್ಲಿ ಕೊಂಡ ಬಾಳೆಹಣ್ಣು, ತುಂಬಾ ರುಚಿಯಾಗಿಯೂ ಸಿಹಿಯಾಗಿಯೂ ಇರುತ್ತದೆ.

ಇನ್ನು ಬೆಲೆಯ ಬಗ್ಗೆ ಹೇಳಬೇಕೆಂದರೆ, ಮೂರರಿಂದ ಐದು ರೂಪಾಯಿಗಳ ವ್ಯತ್ಯಾಸಕ್ಕೆ ಸಾವಯುವ ಆಹಾರ ಸಾಮಾಗ್ರಿಗಳನ್ನು ನಮ್ಮ ಇಡೀ ಕುಟುಂಬದ ಪೋಷಣೆಗಾಗಿ ಕೊಂಡಿದ್ದೇವೆಂಬ ತೃಪ್ತಿ ಸದಾ ಇರುತ್ತದೆ.

ಇಂತಿ

ಸ್ಮಿತಾ
ಸಂಜಯ ನಗರ್
ಬೆಂಗಳೂರು



**ಸಾವಯುವ ಉತ್ಪನ್ನಗಳ ಒಂದು ದೃಶ್ಯ**

**ಸಾವಯುವ ಕೃಷಿ ಉತ್ಪನ್ನಗಳನ್ನು ಹೆಚ್ಚಿಸಲು ಅಳವಡಿಸಬಹುದಾದ ವಿಧಾನಗಳು ಹಲವಾರು ಅವುಗಳಲ್ಲಿ ಮೊದಲನೆಯದು:-**

**ಸಮಗ್ರ ಕೃಷಿ ಪದ್ಧತಿಗಳು :-**

ಸಮಗ್ರ ಕೃಷಿ ಪದ್ಧತಿಯು ಸಂಕೀರ್ಣ ವ್ಯವಸ್ಥೆಯಾಗಿದ್ದು, ಉತ್ಪಾದನೆ, ರೈತರ ಆರ್ಥಿಕ ಪರಿಸ್ಥಿತಿ ಹಾಗೂ ಅವರ ಜೀವನ ಮಟ್ಟ ಸುಧಾರಿಸಲು ತುಂಬಾ ಸಹಕಾರಿಯಾಗಿದೆ.

ಇದರ ಉದ್ದೇಶ:

- ಸಂತುಷ್ಟ ಹಾಗೂ ಸುಸ್ಥಿರ ಆಹಾರ ಉತ್ಪಾದನೆ.



<u>ಸಂಪರ್ಕಿಸ ಬೇಕಾದ ವಿಳಾಸಗಳು</u>

ಸಾವಯುವ ರೈತರು, ಜನೋದಯು ಸಂಸ್ಥೆಯು ಕಾರ್ಯಕ್ರಮದಲಿ ಪಾಲ್ಗೊಳಲು, ಕೂಟಗಳ ರಚನೆ ಮಾಡಲು, ಹಾಗೂ ಒಕ್ಕೂಟಕೆ